ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮಕ್ಕೆ ಹೊಸದಾಗಿ ಪೋಲೀಸ್ ಠಾಣೆ ಮಂಜೂರಾತಿ**

173 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊರಟಗೆರೆ ತಾಲ್ಲೂಕ್ ಕೋಳಾಲ ಗ್ರಾಮದಲ್ಲಿ ಹೊಸದಾಗಿ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದಾಗಿ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಗೃಹ ಸಚಿವರು ಆಶ್ವಾಸನೆ ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ?*

*ಇ) ಈ ಪೋಲೀಸ್ ಸ್ಟೇಷನ್ ತೆರೆಯಲು ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ಆದ್ಯತೆ ಹಾಗೂ ಅಗತ್ಯತೆಯನ್ನು ಅನುಸರಿಸಿ ವರ್ಷಕ್ಕೆ 10 ಪೋಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಿದ್ದು ಅದರಂತೆ ಈ ಸಾಲಿಗೆ ತೆರೆಯಬೇಕಾಗಿರುವ ಪೋಲೀಸ್ ಠಾಣೆಗಳಲ್ಲಿ ಕೋಳಾಲ ಗ್ರಾಮಕ್ಕೆ ಪೋಲೀಸ್ ಠಾಣೆ ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

ಇ) ಸರ್ಕಾರ ಪೋಲೀಸ್ ಠಾಣೆಯ ಮಂಜೂರಾತಿ ಆದೇಶ ಹೊರಡಿಸಿದ ನಂತರ ಅದನ್ನು ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

**ಲೋಕಾಯುಕ್ತದಲ್ಲಿ ಕೇಸುಗಳು ಹಾಗೂ ಪರಿಣಾಮ**

53 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಲೋಕಾಯುಕ್ತರಿಂದ 1990-91, 91-92, 92-93, 93-94ರಲ್ಲಿ ಹಿಡಿದಿರುವ ಕೇಸುಗಳೆಷ್ಟು? ದೋಷಿಗಳೆಂದು ಎಷ್ಟು ಕೇಸುಗಳಲ್ಲಿ ತೀರ್ಮಾನಿಸಲಾಗಿದೆ?*

*ಆ) ದೋಷಿಗಳೆಂದು ತೀರ್ಮಾನವಾದ ಕೇಸುಗಳಲ್ಲಿ ಅಥವಾ ಪ್ರಕರಣಗಳಲ್ಲಿ ಎಷ್ಟು ಕೇಸುಗಳಲ್ಲಿ ತಪ್ಪಿತಸ್ಥರನ್ನು ವಾರ್ನಿಂಗ್ ಮಾಡಲಾಗಿದೆ? ಶಿಕ್ಷೆ ಮಾಡಲಾಗಿದೆ ಹಾಗೂ ಯಾವ ಶಿಕ್ಷೆ ಕೊಡಲಾಗಿದೆ?*

*ಇ) ತಪ್ಪಿತಸ್ಥರು ನಿವೃತ್ತರಾದಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಮುಚ್ಚಲಾಗಿದೆ?*

*ಈ) 31-3-1994ಕ್ಕೆ ಲೋಕಾಯುಕ್ತದಲ್ಲಿ ಪೆಂಡಿಂಗ್ ಇರುವ ಕೇಸುಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

| ವರ್ಷ | ಲಂಚ ಪ್ರಕರಣದಲ್ಲಿ ನೊಂದಾಯಿಸಿದ ಕೇಸುಗಳು | ದಾಳಿಯಲ್ಲಿ ನೊಂದಾಯಿಸಿದ ಪ್ರಕರಣಗಳು |
|---|---|---|